## ಆಲ್ಕೋಹಾಲ್ ಅಷ್ಟೇ ಕೊಡಿ

ಗುಂಡ: ಕೊರೊನಾ ಬರಬಾರದು ಅಂತ ಅದ್ಯಾವುದೋ ಶನಿ ಇದೆಯಂತಲ್ಲ ಕೊಡಿ ಸ್ವಾಮಿ.

ಅಂಗಡಿಯವ: ಅದು ಶನಿ ಅಲ್ಲ ಸ್ಯಾನಿಟೈಸರ್ ಅಂತ ಹೇಳ್ತಾರೆ, ಎರಡು ಟೈಪ್ ಬಂದಿವೆ ಯಾವ್ದು ಕೊಡಲಿ?

ಗುಂಡ: ಎರಡರಲ್ಲಿ ಯಾವುದು ಒಳ್ಳೇದಂತೀರಾ?!

ಅಂಗಡಿಯವ: ಇದು ತಗೊಳ್ಳಿ, ಇದರಲ್ಲಿ 80% ಆಲ್ಕೋಹಾಲ್ ಇರುತ್ತೆ ತಂಬಾ ಪ್ಯೂರ್ ಸಹ. ಬೆಲೆ 50 ರೂಪಾಯಿ.

ಗುಂಡ: ಪುಣ್ಯ ಬರುತ್ತೆ ಸ್ವಾಮಿ, ದಯವಿಟ್ಟು ಅದರಲ್ಲಿ ಇರೋ ಇನ್ನೂ 20% ಬೇರೆ ವಸ್ತುವನ್ನು ತೆಗೆದು ಕೊಡೋಕಾಗುತ್ತಾ ಬೇಕಿದ್ರೆ ಹತ್ತಿಪ್ಪತ್ತು ರೂಪಾಯಿ ಎಕ್ಸ್‌ಟ್ರಾ ತಗೊಳ್ಳಿ

★★★

## ಮಾಸ್ಕ್ ಡಿಸ್ಟೆನ್ಸ್

ಹೆಂಡ್ತಿ: ರೀ ನಿಮಗೆಷ್ಟು ಸಾರಿ ಹೇಳಿದೀನಿ. ಒಬ್ಬೊಬ್ಬರ ಮಾಸ್ಕ್ ಒಂದೊಂದು ದಿಕ್ಕಿಗೆ ಹಾಕಬಾರದಂತ... ವಾಷ್ ಮಾಡೋಕೆ ಅವನ್ನು ಹುಡುಕೋದ್ರಲ್ಲಿ ನಂಗೆ ಸುಸ್ತಾಗುತ್ತೆ.

ಗಂಡ: ಲೇ ಸೋಷಿಯಲ್ ಡಿಸ್ಟೆನ್ಸ್ ಜೊತೆಗೆ ಈಗ ಮಾಸ್ಕ್ ಡಿಸ್ಟೆನ್ಸ್ ಅಂತ ಹೊಸದಾಗಿ ಬಂದಿದೆ ಕಣೆ ಮನೆಯಲ್ಲಿ ಎಲ್ಲರ ಮಾಸ್ಕ್ ಒಂದೇ ಕಡೆ ಇರಬಾರದಂತೆ ಮುಂದಿನ ದಿನ ಅದಕ್ಕೂ ದಂಡ ಹಾಕ್ತಾರಂತೆ ಯಾವ್ದಕ್ಕೂ ಮುಂಜಾಗ್ರತೆ ಇರೋದು ವಾಸಿ ಅಲ್ವೇನೇ!

## ಹೌದಮ್ಮ ಹೌದು

ನರ್ಸ್: ಶೀತ ಇದೆಯಾ?

ರೋಗಿ: ಹೌದು.

ನರ್ಸ್: ಕೆಮ್ಮು ಇದೆಯಾ?

ರೋಗಿ: ಹಾಂ.. ಹೌದು.

ನರ್ಸ್: ತಲೆನೋವು, ಜ್ವರ?

ರೋಗಿ: ಹೌದಮ್ಮ ಹೌದು.

ನರ್ಸ್: ಹಾಕ್ರೀ ರೋಗಿನ ಕ್ವಾರಂಟೈನ್‌ಗೆ ಭಲೇ! ಸಿಕ್ತು ಇವತ್ತೊಂದು ಪಾಸಿಟಿವ್ ಕೇಸು!



## ದಂಡಕ್ಕೆ ದಂಡ..

ಪೊಲೀಸ್: ಹೇ ಹುಡುಗ್ರಾ ಮಾಸ್ಕ್ ಹಾಕೋಬೇಕು ಅಂತ ಗೊತ್ತಿಲ್ವಾ ನಿಮಗೆ ಎಲ್ಲಿ ತೆಗಿರಿ ಎಲ್ರೂ ದಂಡ ಕಟ್ಟಿ ದಂಡ ಕಟ್ಟಿದ ಮೇಲೆ ಗೊತ್ತಾಗುತ್ತೆ ನಿಮಗೆ.

ಗುಂಡ: ಸಾರ್ ಹೊಟ್ಟೆಗೇ ಹಿಟ್ಟಿಲ್ಲ ಇನ್ನು ಮಾಸ್ಕ್ ಬೇರೆ ಕೇಡು. ಯಾರೋ ಉಚಿತವಾಗಿ ಮಾಸ್ಕ್ ಮತ್ತು ಆಲ್ಕೋಹಾಲ್ ಜಾಸ್ತಿ ಇರುವ ಸ್ಯಾನಿಟೈಸರ್ ಹಂಚ್ತಿದಾರೆ ಅಂತ ಗೊತ್ತಾಯ್ತು ಅದ್ಕೇ ಬಂದ್ವಿ ಸಾರ್... ಒಳ್ಳೆಯ ಕೆಲಸಕ್ಕೆ ಹೋಗೋದೇ ದಂಡ ಅಂತ ದಂಡ ಹಾಕೋದ್ಯಾವ ನ್ಯಾಯ ಸಾರ್!

★★★

## ಕೊರೊನಾ ಸ್ಟೋರಿಯಲ್ಲ

ನಲ್ಲೆ: ಪ್ರಿಯಾ ಕೊರೊನಾ ಟೈಂನಲ್ಲಿ ನಿಮಗೊಂದು ಪ್ರೀತಿಸುವ ಹೊಸ ಉಪಾಯ ಹೇಳಲಾ?

ನಲ್ಲ: ವಾವ್! ಬೇಗ ಹೇಳೇ. ಕುತೂಹಲ ತಾಳಲಾರೆ.

ನಲ್ಲೆ: ನೀವು ಆ ವೃತ್ತದಲ್ಲಿ ಕೂತ್ಕೊಳ್ಳಿ ನಾನು ಈ ವೃತ್ತದಲ್ಲಿ ಕೂರ್ತೇನೆ. ಇಬ್ರೂ ಮಾಸ್ಕ್ ಹಾಕೊಂಡೇ ದೂರದಿಂದಲೇ ಮುತ್ತು ಕೊಡೋಣ ಪೊಲೀಸರ್ ಕಿರಿಕಿರಿ ಇರೊಲ್ಲ

ನಲ್ಲ: ಥೂ! ನಿನ್ನ ಇದು ಕೊರೊನಾ ಲವ್ ಸ್ಟೋರಿಯಲ್ಲ ಕಣೆ ಇಪ್ಪತ್ತು ವರ್ಷಗಳ ಹಿಂದೆ ಬಂದಿತ್ತಲ್ಲ ಉಪೇಂದ್ರನ ಲವ್ ಸ್ಟೋರಿ!

★★★

ಲಾಕ್ ಡೌನ್ ವರ್ಷನ್ ವಿಶೇಷ!

ಲಾಕ್ ಡೌನ್ 1.0: ನೀವದನ್ನು ಮಾಡೋಹಾಗಿಲ್ಲ. ಇದನ್ನೂ ಮಾಡೋಹಾಗಿಲ್ಲ.

ಲಾಕ್ ಡೌನ್ 2.0: ನೀವಿದನ್ನು ಮಾಡಬಹುದು. ಆದರೆ ಅದನ್ನು ಮಾಡೋಹಾಗಿಲ್ಲ.

ಲಾಕ್ ಡೌನ್ 3.0: ನೀವಿದನ್ನು ಮಾಡಬಹುದು. ಆದರೆ ಅದನ್ನು ಮಾಡೋಹಾಗಿಲ್ಲ.

ಲಾಕ್ ಡೌನ್ 4.0: ನೀವು ಇದನ್ನು ಅದನ್ನು ಮಾಡಬಹುದು. ಆದರೆ ಅದನ್ನು ಇದನ್ನು ಮಾಡೋಹಾಗಿಲ್ಲ.

ಲಾಕ್ ಡೌನ್ 5.0: ನೀವು ಏನಾದರೂ ಮಾಡ್ಕೊಳ್ಳಿ. ನಾವೇನೂ ಮಾಡೋಕ್ಕಾಗೊಲ್ಲ!

★★★

## ಗುಂಡನ ಎಡವಟ್ಟು!

ಪತ್ನಿಯ ಆರೋಗ್ಯ ವಿಚಾರಿಸುವ ಸಲುವಾಗಿ ಗುಂಡ ಆಫೀಸಿಂದ ಆಕೆಗೆ ಮೆಸೇಜ್ ಮಾಡಿದ, 'ಹೇಗಿದೆ ತಲೆನೋವು'? ಆದರೆ ಆಟೊ ಕರೆಕ್ಷನ್ ದೆಸೆಯಿಂದ ಅದು, 'ಹೇಗಿರುವೆ ತಲೆನೋವು'? ಎಂದಾಗಿ ಸೆಂಡ್ ಆಯಿತು. ಅದು ಗೊತ್ತಾದಾಗಿನಿಂದ ಮನೆಗೆ ಹೋಗಲು ಧೈರ್ಯ ಸಾಲದೆ ಆಫೀಸ್ ಅವಧಿ ಮುಗಿದು 3 ಗಂಟೆಯಾದರೂ ಇನ್ನೂ ಅಲ್ಲೇ ಕೂತಿದ್ದಾನೆ ಗುಂಡ!

(ಸಂಗ್ರಹ) ಹನುಮಂತ ಭಟ್ ಬಿ. ಬೆಂಗಳೂರು

